## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 18 (75)

ಸದಸ್ಯರ ಹೆಸರು : ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 11-08-2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | 2023-24, 2024-25, 2025-26ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಸರ್ಕಾರಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಯಿಂದ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಹೊಂದಿರುವವರ ಒಟ್ಟು ಸಂಖ್ಯೆ: ಎಷ್ಟು: ವರ್ಗಾವಣೆಗೊಂಡ ಪ್ರಾಂಶುಪಾಲರ ಒಟ್ಟು ಸಂಖ್ಯೆ ಎಷ್ಟು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವರ್ಗಾವಣೆಗೊಂಡ ಉಪನ್ಯಾಸಕರ ಸಂಖ್ಯೆ ಎಷ್ಟು: | ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಹೊಂದಿರುವವರ ಒಟ್ಟು ಸಂಖ್ಯೆ<br>2023-24 : 0<br>2024-25 : 0<br>2025-26 : 287<br><br>ವರ್ಗಾವಣೆಗೊಂಡ ಪ್ರಾಂಶುಪಾಲರ ಒಟ್ಟು ಸಂಖ್ಯೆ<br>2023-24 : 35<br>2024-25 : 68<br>2025-26 : 33<br><br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವರ್ಗಾವಣೆಗೊಂಡ ಉಪನ್ಯಾಸಕರ ಸಂಖ್ಯೆ<br>2023-24 : 683<br>2024-25 : 824<br>2025-26 : 577 |
| ಆ) | ಮುಂಬಡ್ತಿ ಪಡೆದ/ವರ್ಗಾವಣೆ ಬಯಸಿದ ಪ್ರಾಂಶುಪಾಲರಿಗೆ ಸ್ಥಳ ಆಯ್ಕೆ ಮಾಡಲು ರಾಜ್ಯದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳಿಗೆ ಅವಕಾಶ ನೀಡಲಾಗಿದೆಯೇ: ಇಲ್ಲದ್ದಲ್ಲಿ, ಕಾರಣವೇನು: ಯಾವ ಮಾನದಂಡದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆಯ್ಕೆ ಮಾಡಲು ಅವಕಾಶ ನೀಡಲಾಗಿದೆ: | ಇಲ್ಲ<br>ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಹೊಂದಿದ ಅರ್ಹ ಉಪನ್ಯಾಸಕರಿಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಕಾಯ್ದೆ 3 (1)ರನ್ವಯ ಉಪನ್ಯಾಸಕರು ಬಡ್ತಿಯ ಮೇಲೆ ಸ್ಥಳನಿಯುಕ್ತಿಯಾಗುವಾಗ ವಲಯ-ಸಿ ನಲ್ಲಿನ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಪರಂತು ಉಪನ್ಯಾಸಕರು ವಲಯ-ಸಿ ನಲ್ಲಿ ನಿರಂತರವಾಗಿ 10 ವರ್ಷಗಳಿಗೂ ಅಥವಾ ಸಂಚಿತವಾಗಿ ವಲಯ-ಸಿ ನಲ್ಲಿ 15 ವರ್ಷಗಳಿಗೂ ಹೆಚ್ಚಾಗಿ ಈಗಾಗಲೇ ಸೇವೆ ಸಲ್ಲಿಸಿದ್ದಲ್ಲಿ ವಲಯ-ಬಿ ಅಥವಾ ವಲಯ-ಎ ಯಲ್ಲಿನ ಕಾಲೇಜುಗಳಿಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ:23-05-2025 ರನ್ವಯ ಕೌನ್ಸೆಲಿಂಗ್ ಪ್ರಕ್ರಿಯೆಗೆ ಖಾಲಿ ಹುದ್ದೆಗಳ ಮಾಹಿತಿಯನ್ನು ಆಡಳಿತಾತ್ಮಕ ಅವಶ್ಯಕತೆ/ಅಗತ್ಯತೆ ಅನುಗುಣವಾಗಿ ಪ್ರಕಟಿಸಲು ನಿರ್ದೇಶಕರು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ (competent authority to publish vacant posts as per administrative requirements of the department). ಅದರಂತೆ, ಆಡಳಿತಾತ್ಮಕ ಅವಶ್ಯಕತೆ/ಅಗತ್ಯತೆ ಅನುಗುಣವಾಗಿ ಹುದ್ದೆಗಳನ್ನು ಪರಿಗಣಿಸಲಾಗಿದೆ. |

| | | |
|---|---|---|
| ಇ) | ಉಪನ್ಯಾಸಕರ ವರ್ಗಾವಣೆಯಲ್ಲಿ ಉಪನ್ಯಾಸಕರಿಗೆ ರಾಜ್ಯದಲ್ಲಿ ಖಾಲಿಯಿರುವ ಎಲ್ಲಾ ಹುದ್ದೆಗಳಿಗೆ ಸ್ಥಳ ಆಯ್ಕೆ ಮಾಡಲು ಅವಕಾಶ ನೀಡಲಾಗಿದೆಯೇ: ನೀಡದೆ ಇದ್ದಲ್ಲಿ, ಕಾರಣವೇನು? (ಪ್ರತಿ ಶೈಕ್ಷಣಿಕ ವರ್ಷಗಳ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ನೀಡುವುದು ) | ಇಲ್ಲ<br><br>ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರಾಂಶುಪಾಲರು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2022 ರನ್ವಯ ಉಪನ್ಯಾಸಕರಿಗೆ ವಿದ್ಯಾರ್ಥಿಗಳ ಸಂಖ್ಯಾನುಸಾರ ವಾರಕ್ಕೆ ಪ್ರಾಯೋಗಿಕ ವಿಷಯಕ್ಕೆ 24 ಮತ್ತು ಇತರೆ ವಿಷಯಗಳಿಗೆ 20 ಗಂಟೆಗಳ ಕಾರ್ಯಭಾರವನ್ನು ನಿಗದಿಪಡಿಸಲಾಗಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 09 ಟಿಪಿಯು 2024, ದಿನಾಂಕ:12-09-2024ರ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೊಂದಣಿ ಹಾಗೂ ಸಹಾಯಾನುದಾನ ಇತ್ಯಾದಿ), ನಿಯಮ 2024ರ ನಿಯಮ 16 & 17 ಹಾಗೂ ಶಡ್ಯೂಲ್ 04 ರನ್ವಯ ಪದವಿ ಪೂರ್ವ ತರಗತಿಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಸಂಖ್ಯೆಯನ್ನು ಹೊಂದಿರಬೇಕಾಗಿರುತ್ತದೆ. ಉಪನ್ಯಾಸಕರ ಕಾರ್ಯಭಾರವು ಪೂರ್ಣಗೊಳ್ಳಲು ಪ್ರಾಯೋಗಿಕವಲ್ಲದ ವಿಷಯಗಳಿಗೆ 320 ಮತ್ತು ಪ್ರಾಯೋಗಿಕ ವಿಷಯಗಳಿಗೆ 160 ವಿದ್ಯಾರ್ಥಿಗಳ ಸಂಖ್ಯೆ ಹೊಂದಿರುವುದು ಅವಶ್ಯಕವಾಗಿರುತ್ತದೆ.<br><br>ಕೌನ್ಸೆಲಿಂಗ್ ಪ್ರಕ್ರಿಯೆಗೆ ಖಾಲಿ ಹುದ್ದೆಗಳ ಮಾಹಿತಿಯನ್ನು ಆಡಳಿತಾತ್ಮಕ ಅವಶ್ಯಕತೆ/ಅಗತ್ಯತೆ ಅನುಗುಣವಾಗಿ ಪ್ರಕಟಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021. ದಿನಾಂಕ:23-05-2025 ರನ್ವಯ ನಿರ್ದೇಶಕರು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ (competent authority to publish vacant posts as per administrative requirements of the department).<br><br>ಆದ್ದರಿಂದ, ವರ್ಗಾವಣೆಯಲ್ಲಿ 40ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೊಂದಿರುವ ಕಾಲೇಜುಗಳ ಖಾಲಿ ಹುದ್ದೆಗಳನ್ನು ಪರಿಗಣಿಸಲಾಗಿದೆ. |

ಸಂಖ್ಯೆ: ಇಪಿ 255 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು